ಓ ಎಸ್ ಃ 108/16 ಪಿ. ಡಬ್ಲ್ಯು-1

ಸಾಕ್ಷಿಯನ್ನು ದಿಃ 04.01.2021 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಬಿ ಎಂ ಎನ್ ವಕೀಲರಿಂದಃ**

ರತ್ನಮ್ಮ ಕೋಂ ಸೋಮಚಾರಿ, ವಯಸ್ಸು 49 ವರ್ಷ, ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದ್ದೇ ಆಗಿರುತ್ತದೆ. ಈ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

2010 ಮತ್ತು 11 ನೇ ಇಸವಿಯ ಮನೆ ಮಂಜೂರಾತಿ ಮತ್ತು ಕಾಮಗಾರಿ ಆದೇಶ ಪತ್ರದ ಮೂಲ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.1 ಎಂದು, 2015 ನೇ ಇಸವಿಯ ಡಿಮಾಂಡ್ ಎಕ್ಸಾಟ್ರ್ಯಾಕ್ಟ್ ನ್ನು ನಿಪಿ.2 ಎಂದು, ಎರಡು ಕಂದಾಯ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.3 ಮತ್ತು ನಿಪಿ.4 ಎಂದು, ದಿನಾಂಕ 18.01.2012 ರ ಖಾಲಿ ನಿವೇಶನದ ಶುದ್ದ ಕ್ರಯಪತ್ರದ ದೃಡೀಕೃತ ನಕಲನ್ನು ನಿಪಿ.5 ಎಂದು, ದಿನಾಂಕ 15.10.2015 ರ ಹಕ್ಕು ಖುಲಾಸೆಯ ಹಕ್ಕು ನಿವೃತ್ತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.6 ಎಂದು, ಸರ್ವೆ ನಂಬರ್ 207 ರ ಆಸ್ತಿಗೆ ಸಂಬಂಧಿಸಿದ ಋಣ ಭಾರ ಪತ್ರವನ್ನು ನಿಪಿ.7 ಎಂದು, 2015-16 ನೇ ಇಸವಿಯ ಡಿಮಾಂಡ್ ರಿಜಿಸ್ಟರ್ ನ್ನು ನಿಪಿ.8 ಎಂದು, ಹೆಗ್ಗೂರು ಗ್ರಾಮ ಪಂಚಾಯಿತಿಯವರು ನೀಡಿರುವ ಸ್ವೀಕೃತಿಯನ್ನು ನಿಪಿ.9 ಎಂದು, ದಾವಾ ಆಸ್ತಿಗೆ ಸಂಬಂಧಿಸಿದ ಕಚ್ಚಾ ನಕಾಶೆಯನ್ನು ನಿಪಿ.10 ಎಂದು, ದಿನಾಂಕ 25.11.2015 ರ ಒಂದು ಸ್ವೀಕೃತಿಯನ್ನು ನಿಪಿ.11 ಎಂದು, ಬನ್ನೂರು ಪೋಲಿಸ್ ಠಾಣೆಯವರು ನೀಡಿರುವ ಒಂದು ಹಿಂಬರಹವನ್ನು ನಿಪಿ.12 ಎಂದು, ಬನ್ನೂರು ಪೋಲಿಸರು ನೀಡಿರುವ ಎಫ್ ಐ ಆರ್ ಪ್ರತಿಯನ್ನು ನಿಪಿ.13 ಎಂದು, ಬನ್ನೂರು ಪೋಲಿಸರು ನೀಡಿರುವ ಎಫ್ ಐ ಆರ್ ನ್ನು ನಿಪಿ.14 ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ